ಆದಿಜಗದ್ಗುರು

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ

**ಜಾತ್ರಾ ಮಹೋತ್ಸವ**

ಸುತ್ತೂರು ಶ್ರೀಕ್ಷೇತ್ರ

## ಕೃಷಿಮೇಳ 2016



# ವೈವಿಧ್ಯಮಯ ರಂಗೋಲಿಯ ಕಿರುಹೊತ್ತಿಗೆ

ಲೇಖಕರು: ಎನ್ ಜಮುನಾ ಅರಸ್, ನೇತ್ರಾವತಿ ಎತ್ತಿನಮನಿ ಮತ್ತು ದಿವ್ಯ ಎಚ್.ವಿ.

# ರಂಗುರಂಗಿನ ರಂಗೋಲಿ

ರಂಗೋಲಿ ಒಂದು ಜನಪದ ಕಲೆ. ಇದು ಸಾವಿರಾರು ವರ್ಷಗಳಿಂದ ಪರಂಪರಾಗತವಾಗಿ ನಡೆದು ಬಂದ ಕಲೆ. ರಂಗೋಲಿ ನಮ್ಮ ಬದುಕಿನ ಅವಿಭಾಜ್ಯ ಅಂಗ ಎಂದು ಹೇಳಬಹುದು. ಸಂಶೋಧನೆ ಮೂಲಕ ರಂಗೋಲಿ ಇತಿಹಾಸವನ್ನು ಜಾನಪದ ಅಕಾಡಮಿಯವರು ದಾಖಲಿಸಿದ್ದಾರೆ. ಭಾರತದ ವಿವಿಧ ಪ್ರಾಂತ್ಯಗಳಲ್ಲಿ ರಂಗೋಲಿ ಇನ್ನೂ ಜೀವಂತವಾಗಿದೆ. ರಂಗೋಲಿಗೆ ಉಪಯೋಗಿಸುವ ವಸ್ತುಗಳು, ಆಕಾರ, ಬಣ್ಣ, ಚಿತ್ರಕಲೆ ವಿಭಿನ್ನವಾಗಿರುತ್ತದೆ. ಈ ಕಲೆ ನಶಿಸಿ ಹೋಗದ ಹಾಗೆ ಹಾಗೂ ಮುಂದಿನ ಪೀಳಿಗೆಯವರು ಮುಂದುವರಿಸುವ ಹಾಗೆ ಮಾಡುವುದೆ ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.


ಈ ಕಿರುಹೊತ್ತಿಗೆಯಲ್ಲಿ ರಂಗೋಲಿಗೆ ಬಳಸುವ ಸಾಧನಗಳು, ಹಬ್ಬಗಳಲ್ಲಿ ಹಾಗೂ ವಾರದ ರಂಗೋಲಿ ಚಿತ್ರ ಮತ್ತು ರಂಗೋಲಿಯಲ್ಲಿ ಆಗುತ್ತಿರುವ ಹೊಸ ಪ್ರಯೋಗಗಳ ಬಗ್ಗೆ ಮಾಹಿತಿ ನೀಡಲಾಗಿದೆ. ರಂಗೋಲಿ ಎಂದರೆ ರಂಗ- ಬಣ್ಣ, ವಲ್ಲಿ-ಬಳ್ಳಿ. ನಮ್ಮ ಭಾರತೀಯ ಸ್ತ್ರೀಯರಿಗೆ ರಂಗೋಲಿ ಎಂದರೆ ಬಲು ಅಚ್ಚುಮೆಚ್ಚು ಹಾಗೂ ಪೂಜ್ಯ ಭಾವನೆ. ದಿನದ ಪ್ರಾರಂಭ ಮನೆ ಅಂಗಳ ಗುಡಿಸಿ, ನೀರು ಹಾಕಿ ನಂತರ ರಂಗೋಲಿ ಬಿಡುವುದರೊಂದಿಗೆ ಶುರುವಾಗುತ್ತದೆ. ಇದು ಮನೆಗೆ ಬರುವವರಿಗೆ ಮುಂಜಾನೆಯ ಶುಭೋದಯ ಹೇಳುತ್ತದೆ.

# ರಂಗೋಲಿಗೆ ಬಳಸುವ ಸಾಧನಗಳು ಹಾಗೂ ವಿಧಾನಗಳು

ಪ್ರಾರಂಭದಲ್ಲಿ ಅಕ್ಕಿ ಹಿಟ್ಟು ಅಥವಾ ಅಕ್ಕಿಯನ್ನು ರುಬ್ಬಿ ಸಣ್ಣ ಬಟ್ಟೆಯ ತುಂಡನ್ನು ಅದರಲ್ಲಿ ಅದ್ದಿ ರಂಗೋಲಿ ಬಿಡುತ್ತಿದ್ದರು. ಈ ರೀತಿ ಬಿಟ್ಟ ರಂಗೋಲಿ 2-3 ದಿನ ಅಳಿಸದೆ ಉಳಿಯುತ್ತದೆ.

ಇದೀಗ ರಂಗೋಲಿ ಕಲ್ಲನ್ನು ನುಣ್ಣಗೆ ಪುಡಿ ಮಾಡಿ ಅದರಲ್ಲಿ ವಿನ್ಯಾಸ ಮೂಡಿಸುತ್ತಾರೆ. ಎಳೆ ರಂಗೋಲಿ ವಿನ್ಯಾಸದಲ್ಲಿ ರಂಗೋಲಿಯಿಂದ ಗೆರೆಗಳನ್ನು ಮೂಡಿಸುತ್ತಾ ಸಣ್ಣ ವಿನ್ಯಾಸದಿಂದ ಪ್ರಾರಂಭಗೊಂಡು ದೊಡ್ಡದಾಗಿ ಬೆಳೆಸುವ ಕಲೆ ಇದರಲ್ಲಿ ಕಾಣಬಹುದು. ಚುಕ್ಕೆ ರಂಗೋಲಿಯಲ್ಲಿ ಚುಕ್ಕೆಗಳನ್ನು ಲೆಕ್ಕ ಹಾಕಿ ಇಟ್ಟು ಒಂದು ಚುಕ್ಕೆಯಿಂದ ಮತ್ತೊಂದು ಚುಕ್ಕೆಗೆ ಗೆರೆ ಎಳೆಯಲಾಗುತ್ತದೆ. ಅಂಚಿನಲ್ಲಿ ಎಳೆ ಮತ್ತು ಚುಕ್ಕಿ ವಿನ್ಯಾಸದಿಂದ ರಂಗೋಲಿ ಬಿಡಿಸಬಹುದು. ಕೆಮ್ಮಣ್ಣು, ಅರಿಶಿನ, ಕುಂಕುಮ, ಉಪ್ಪು, ಅಕ್ಕಿ, ಬೇಳೆ ಕಾಳುಗಳನ್ನು ಬಳಸಿ ರಂಗೋಲಿ ವಿನ್ಯಾಸ ರೂಪಿಸಬಹುದು ಹಾಗೂ ಹೋಳಿ ಬಣ್ಣಗಳನ್ನು ರಂಗೋಲಿ ಪುಡಿಯಲ್ಲಿ ಮಿಶ್ರ ಮಾಡಿ ಚುಕ್ಕಿ ರಂಗೋಲಿ ಮತ್ತು ಇತರೆ ರಂಗೋಲಿಗಳಿಗೆ ಬಣ್ಣಗಳನ್ನು ತುಂಬಿ ರಂಗೋಲಿಗೆ ಹೆಚ್ಚು ಆಕರ್ಷಣೆ ನೀಡಬಹುದು.


ಧಾನ್ಯಗಳ ರಂಗೋಲಿ



ತಟ್ಟೆಯಲ್ಲಿ ಸ್ಟೆನ್ಸಿಲ್ ರಂಗೋಲಿ



ಸರಳ ಹೂವಿನ ರಂಗೋಲಿ



- ಹೂವಿನಿಂದ ರಂಗೋಲಿ ಬಿಡಿಸುವುದು-ಹೂವಿನ ದಳಗಳನ್ನು ಬಳಸಿ ಅಥವಾ ಇಡೀ ಹೂವನ್ನು ಉಪಯೋಗಿಸಿ ರಂಗೋಲಿ ವಿನ್ಯಾಸದಲ್ಲಿ ಬಣ್ಣದ ಆಕರ್ಷಣೆ ಕೊಡಬಹುದು.
- ತಟ್ಟೆಯಲ್ಲಿ ನೀರು ಹಾಕಿ ಅದರಲ್ಲಿ ರಂಗೋಲಿ ಬಿಡಿಸುವುದು.
- ರಂಗೋಲಿ ವಿನ್ಯಾಸದ ಅಚ್ಚನ್ನು (ಸ್ಟೆನ್ಸಿಲ್) ಉಪಯೋಗಿಸಿ ಒಂದೇ ರಂಗೋಲಿಯಲ್ಲಿ ವೈವಿಧ್ಯಮಯ ಬಣ್ಣ ಬಳಸಿ ಬಹು ಬೇಗ ಅನುಭವ ಇಲ್ಲದವರು ರಂಗೋಲಿ ಬಿಡಿಸಬಹುದು.
- ಥರ್ಮೋಕೊಲ್ ಮೇಲೆ ರಂಗೋಲಿ ವಿನ್ಯಾಸ ಬಿಡಿಸಿ, ಟೂತ್ ಪಿಕ್ಸ್‌ನಿಂದ ಇಡೀ ಹೂವನ್ನು ಚುಚ್ಚಿ ಜೋಡಿಸಿವುದು. ಈ ವಿಧಾನದಲ್ಲಿ 2-3 ದಿವಸ ಹೂ ಬಾಡದಿರಲು ಆಗಾಗ್ಗೆ ಹೂವಿನ ಮೇಲೆ ನೀರನ್ನು ಚಿಮುಕಿಸತ್ತಿರಬೇಕು.
- ಇತ್ತಿಚೆಗೆ ಸುಲಭ ರಂಗೋಲಿ ವಿಧಾನ ಅಭ್ಯಾಸದಲ್ಲಿದೆ. ಕೈ ಬೆರಳುಗಳಿಂದ, ಕಡ್ಡಿಯಿಂದ, ಮುಚ್ಚಳಗಳನ್ನು ಉಪಯೋಗಿಸಿ ರಂಗೋಲಿ ವಿನ್ಯಾಸ ಮಾಡಬಹುದಾಗಿದೆ.

### ರಂಗೋಲಿಯನ್ನು ವಿವಿಧ ರಾಜ್ಯಗಳಲ್ಲಿ ವಿಭಿನ್ನವಾಗಿ ಕರೆಯಲಾಗುತ್ತದೆ

ಗುಜರಾತ್, ಕರ್ನಾಟಕ ಮತ್ತು ಮಹಾರಾಷ್ಟ್ರ : ರಂಗೋಲಿ

ತಮಿಳುನಾಡು : ಕೊಲಂ

ಬಿಹಾರ, ಉತ್ತರಖಾಂಡ್ : ಅರಿಪನ್

ಪಶ್ಚಿಮ ಬಂಗಾಳ : ಅಲ್ಪನಾ

ಉತ್ತರ ಪ್ರದೇಶ : ಚೌಕ್ ಪುರಾನಾ


ರಾಜಸ್ತಾನ : ಮದಾನಾ




ಅಕ್ಕಿ ಹಿಟ್ಟಿನ ರಂಗೋಲಿ



ಎಳೆ ರಂಗೋಲಿ



ಚುಕ್ಕೆ ರಂಗೋಲಿ (1)



ಚುಕ್ಕೆ ರಂಗೋಲಿ (2)




ಹೂವಿನ ರಂಗೋಲಿ




ಉಪ್ಪಿನ ರಂಗೋಲಿ




ಪೂನಾ ರಂಗೋಲಿ




ಕೈ ಬೆರಳುಗಳಿಂದ ಸರಳ ರಂಗೋಲಿ




ನೀರಿನಲ್ಲಿ ರಂಗೋಲಿ



ಕುಂದನ್ ರಂಗೋಲಿ



ಮಿಶ್ರ ವಸ್ತುಗಳ ರಂಗೋಲಿ




ಚುಕ್ಕೆಯಲ್ಲಿ ಅಂಚಿನ ರಂಗೋಲಿ


# ಹಬ್ಬಗಳಲ್ಲಿ ರಂಗೋಲಿ ವಿನ್ಯಾಸ

- ಹೂವಿನ ರಂಗೋಲಿಯನ್ನು ಓಣಂ ದಿನದಂದು ಕೇರಳದಲ್ಲಿ ಎಲ್ಲರ ಮನೆ ಅಂಗಳದಲ್ಲಿ ಬಿಡಿಸಿ ದೀಪವನ್ನು ಮಧ್ಯ ಇಟ್ಟು ನೃತ್ಯಮಾಡುವುದ ಹಬ್ಬದ ಪದ್ಧತಿಯಲ್ಲೊಂದು.
- ಚಿತ್ರಕಲೆ ಪರಿಣಿತಿ ಹೊಂದಿದವರು ದೇವರು, ಗಿಡ ಮರಗಳು ಹಾಗೂ ಪಕೃತಿ ಚಿತ್ರಗಳನ್ನು ಬಿಡಿಸುವ ಕಲೆಯನ್ನು ರಂಗೋಲಿಯಲ್ಲಿ ನೋಡಬಹುದಾಗಿದೆ.
- ಹಬ್ಬಗಳಲ್ಲಿ ರಂಗೋಲಿ: ಪ್ರತಿ ಹಬ್ಬಕ್ಕೆ ವಿಶೇಷವಾದ ರಂಗೋಲಿ ಬಿಡಿಸುವುದು ಹಾಗೂ ಅದರಲ್ಲಿ ವೈಶಿಷ್ಟ್ಯತೆಯನ್ನು ತರುವುದು ನಮ್ಮ ಭಾರತೀಯ ನಾರಿಯರಲ್ಲಿ ಹೆಚ್ಚಾಗಿದೆ ಎಂದು ಹೇಳಬಹುದು.
- ಸಂಕ್ರಾಂತಿಯಲ್ಲಿ-ಭತ್ತ, ಕಬ್ಬು, ಎಳ್ಳು, ಬೆಲ್ಲ, ಹೊಸ ಮಡಿಕೆಯಲ್ಲಿ ಅಡುಗೆ ಮಾಡುವ ಚಿತ್ತಾರದ ರಂಗೋಲಿಯನ್ನು ಮನೆ ಮುಂದೆ ಕಾಣಬಹುದು
- ಶಿವರಾತ್ರಿಯಲ್ಲಿ: ಬಿಲ್ವಪತ್ರೆ ದಳದ ಹಾಗೂ ಲಿಂಗದ ಚಿತ್ತಾರಗಳನ್ನು ಬಿಡಿಸಲಾಗುತ್ತದೆ.
- ಯುಗಾದಿಯಲ್ಲಿ: ಬೇವು, ಬೆಲ್ಲ, ಮಾವಿನಕಾಯಿ ಹೂ ಮೂಡಿಸುವ ರಂಗೋಲಿ ನೋಡಬಹುದು.
- ವರಮಹಾಲಕ್ಷ್ಮಿ ಹಬ್ಬ; ಕಳಸ, ತೆಂಗಿನಕಾಯಿ, ವೀಳ್ಯೆದೆಲೆ, ಅಲಂಕಾರವಾದ ಲಕ್ಷ್ಮಿ ಮುಖ ಇರುವ ರಂಗೋಲಿಯನ್ನು ಬಿಡಿಸಲಾಗುತ್ತದೆ.
- ಗೌರಿ ಮತ್ತು ಗಣೇಶ: ಲಕ್ಷ್ಮಿ ಮುಖದ ಜೊತೆ ಗಣಪತಿ ಚಿತ್ರಮೂಡಿಸುವ ರಂಗೋಲಿ ಕಲೆಯನ್ನು ನೋಡಬಹುದು.
- ದೀಪಾವಳಿ: ದೀಪಗಳ ವೈವಿಧ್ಯಮಯ ರಂಗೋಲಿ ಚಿತ್ತಾರದ ಜೊತೆ ಸಹಜ ಉರಿಯುತ್ತಿರುವ ದೀಪದ ಹಣತೆ ರಂಗೋಲಿಯನ್ನು ಕಾಣಬಹುದು.
- ಗ್ರಹಕ್ಕೆ ಹಾಗೂ ಪ್ರತಿದಿನಕ್ಕೆ ಅನುಗುಣವಾಗಿ ರಂಗೋಲಿ ವಿನ್ಯಾಸ ಕೂಡ ರೂಢಿಯಲ್ಲಿದೆ.

ವೈವಿಧ್ಯಮಯ ವಸ್ತುಗಳ ಮಿಶ್ರಣಗಳನ್ನು ಉಪಯೋಗಿಸಿ ರಂಗೋಲಿ ಬಿಡಿಸುವುದು ಒಂದು ಅದ್ಭುತ ಕಲೆ ಎಂದು ಹೇಳಬಹುದು.



ಸಂಕ್ರಾಂತಿ ರಂಗೋಲಿ



ತುಳಸಿ ರಂಗೋಲಿ



ನವರಾತ್ರಿ



ವೈಕುಂಠ ಏಕಾದಶಿ



ಓಣಂ ರಂಗೋಲಿ



ಸುಗ್ಗಿ ರಂಗೋಲಿ




ಸ್ವಾತಂತ್ರ ದಿನಾಚರಣೆ





ಕ್ರಿಸ್‌ಮಸ್ ಹಬ್ಬ





ಸೂರ್ಯ ಗ್ರಹ-ಭಾನುವಾರ





ಚಂದ್ರ ಗ್ರಹ-ಸೋಮವಾರ





ಮಂಗಳ ಗ್ರಹ- ಮಂಗಳವಾರ





ಬುಧ ಗ್ರಹ- ಬುಧವಾರ




ಗುರು ಗ್ರಹ- ಗುರುವಾರ





ಶುಕ್ರಗ್ರಹ- ಶುಕ್ರವಾರ



ಶನಿ ಗ್ರಹ- ಶನಿವಾರ




ರಾಹು ಗ್ರಹ



ಕೇತು ಗ್ರಹ

**ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ**

ಸುತ್ತೂರು-571 129, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ

ದೂರವಾಣಿ: 08221-232218, ಫ್ಯಾಕ್ಸ್: 08221-232377

ಇ ಮೇಲ್: jsskvk@gmail.com www.jsskvk.in